**ಟೀಚರ್(ಸಿಟ್ಟಿನಿಂದ):** ನಾನು ನಿನ್ನ ಅಮ್ಮನಾದರೆ ಎರಡೇ ದಿನಗಳಲ್ಲಿ ನಿನ್ನನ್ನು ಸುಧಾರಿಸಿ ಸರಿ ದಾರಿಗೆ ತರುತ್ತೇನೆ.
**ಗುಂಡ:** ಇರಿ ಮೇಡಂ, ನಾನೀಗಲೇ ಹೋಗಿ ನನ್ನಪ್ಪನಿಗೆ ಹೇಳುತ್ತೇನೆ.
**ಟೀಚರ್:** ಏನಂತ?
**ಗುಂಡ:** ಅಪ್ಪಾ, ನಿಮಗೆ ಸದ್ಯದಲ್ಲೇ ಲಾಟರಿ ಹೊಡೆಯಲಿದೆ ಅಂತ!

***

ಅತ್ಯುತ್ಸಾಹದಲ್ಲಿ ಕ್ರಿಕೆಟ್ ಅಭಿಮಾನಿ ಗುಂಡನಾಡಿದ ಉತ್ಪ್ರೇಕ್ಷೆಯ ಉದ್ಗಾರ ಹೀಗಿತ್ತು.
'ಐಪಿಎಲ್‌ನಲ್ಲಿ ಆರ್‌ಸಿಬಿ ತಂಡ ಹೀಗೆ ಸ್ಥಿರ ಪ್ರದರ್ಶನ ನೀಡುತ್ತಿದ್ದರೆ ಬಾಕಿ ತಂಡಗಳೆಲ್ಲಾ ಒಗ್ಗೂಡಿ ಮಹಾಘಟಬಂಧನದ ಬಗ್ಗೆ ಯೋಚಿಸಬೇಕಾದೀತು'.

**ಪತ್ನಿ:** ಹೇಳ್ತಾ ಹೇಳ್ತಾ ನಮ್ಮ ಮದುವೆಯಾಗಿ ಮೂವತ್ತು ವರ್ಷ ಕಳೀತು ಕಣ್ರೀ..
**ಪತಿ:** ಹೇಳ್ತಾ ಹೇಳ್ತಾ ನಿಂದು ಕಳೀತು ಕಣೆ. ನಂದು ಕೇಳ್ತಾ ಕೇಳ್ತಾ ಆಯ್ತು!

***

**ಅನಿತಾ:** ನಿನ್ನ ಪರೀಕ್ಷೆಯ ಫಲಿತಾಂಶ ಏನಾಯಿತೆ?
**ಪುಟ್ಟಿ:** ನಾನು ಉತ್ತೀರ್ಣಳಾದೆ. ನನ್ನ ಸಹಪಾಠಿಗಳೆಲ್ಲರೂ ಪಾಸ್. ಆದರೆ ನಮ್ಮ ಟೀಚರ್ ಫೇಲ್ ಆಗಿದ್ದಾರೆ ಅಮ್ಮ.
**ಅನಿತಾ:** ಅದು ಹೇಗೆ?
**ಪುಟ್ಟಿ:** ಅವರಿನ್ನೂ ಅದೇ ತರಗತಿಯಲ್ಲಿ ಪಾಠ ಮಾಡುತ್ತಿದ್ದಾರೆ.

***

**ಟೀಚರ್:** ನಿನ್ನ ರಿಸಲ್ಟ್ ಚೆನ್ನಾಗಿಲ್ಲ. ನಾಳೆ ನಿನ್ನಪ್ಪನನ್ನು ಕರೆದುಕೊಂಡು ಬಾ. ಇಲ್ಲದಿದ್ದರೆ...
**ಗುಂಡ:** ಇಲ್ಲದಿದ್ದರೆ... ಏನು ಟೀಚರ್?
**ಟೀಚರ್:** ಇಲ್ಲದಿದ್ದರೆ ರಿಸಲ್ಟ್ ಫೇಸ್‌ಬುಕ್‌ನಲ್ಲಿ ಅಪ್ಲೋಡ್ ಮಾಡುತ್ತೇನೆ.
**ಗುಂಡ:** ಸರಿ, ಹಾಗೇ ಮಾಡಿ. ನಾನೂ ನನ್ನಮ್ಮನಿಗೆ, 'ಅಪ್ಪ ನಮ್ಮ ಮೇಡಂನ ಫ್ರೆಂಡ್ ಲಿಸ್ಟಿನಲ್ಲಿದ್ದಾರೆ' ಎಂದು ಹೇಳುತ್ತೇನೆ.

***

**ಗುಂಡ:** ಈ ಪ್ರೇಮಿಗಳನ್ನು ಕಂಡು ನನಗೊಂದು ಸಂದೇಹ ಮೂಡುತ್ತದೆ.
**ಗೋಪಿ:** ಏನದು?
**ಗುಂಡ:** 'ನಾನಿಂದು ಜೀವಿಸುತ್ತಿರಲು ನೀನೇ ಕಾರಣ' ಎಂದು ಅವರು ಪರಸ್ಪರ ಹೇಳಿ ಕೊಳ್ಳುತ್ತಾರೆ ತಾನೆ.
**ಗೋಪಿ:** ಹೌದು. ಅದಕ್ಕೇನೀಗ?
**ಗುಂಡ:** ಹಾಗಾದರೆ ಈ ಆಮ್ಲಜನಕಕ್ಕೆ ಬೆಲೆಯೇ ಇಲ್ಲವೆ?

***

**ಗುಂಡ:** ದಿನಾ ನಾನು ಮಧ್ಯಾಹ್ನದ ನಂತರ ಎರಡು ಗಂಟೆ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ.
**ಗೋಪಿ:** ಹೌದೆ, ಹಾಗಾದರೆ ನೀನು ಮಧ್ಯಾಹ್ನದ ಬಳಿಕ ನಿದ್ರಿಸುವೆಯಾ?
**ಗುಂಡ:** ಇಲ್ಲ, ನನ್ನ ಹೆಂಡತಿ ನಿದ್ರಿಸುತ್ತಾಳೆ!

***

ಹುಡುಗನೋರ್ವ ಹುಡುಗಿಯನ್ನು ತದೇಕಚಿತ್ತನಾಗಿ ನೋಡುತ್ತಿದ್ದ. ಇದನ್ನು ಗಮನಿಸಿದ ಆಕೆ ಸಿಟ್ಟಿನಿಂದ ಕೇಳಿದಳು, 'ಯಾಕೆ ಹಾಗೇ ತದೇಕಚಿತ್ತನಾಗಿ ನೋಡುತ್ತಿರುವೆ'? ಹುಡುಗ ಉತ್ತರಿಸಿದ, 'ನೀನು ನನ್ನ ಅಮ್ಮನಾಗಿರುತ್ತಿದ್ದರೆ ನಾನೂ ನಿನ್ನ ಹಾಗೇ ಚೆಂದವಾಗಿರುತ್ತಿದ್ದೆ' ಎಂದು ಚಿಂತಿಸುತ್ತಾ ನೋಡುತ್ತಿದ್ದೆ ಅಷ್ಟೆ.

ಗಣಿತ ಟೀಚರ್ ಬೋರ್ಡ್ ಮೇಲೆ 2x + yx, 2/3yx+3x(4y11x)=0 ಎಂದು ಬರೆದು ಮರಿ ಗುಂಡನತ್ತ ತಿರುಗಿ, 'ಈ ಪ್ರಾಬ್ಲಂಮ್ ಬಗೆಹರಿಸು' ಎಂದರು.
ಮರಿಗುಂಡ ಡಸ್ಟರ್ ಎತ್ತಿ ಬೋರ್ಡ್ ಮೇಲೆ ಬರೆದದ್ದನ್ನೆಲ್ಲ ಒರೆಸಿ 'ಈಗ ಸಮಸ್ಯೆ ಬಗೆಹರಿಯಿತು ಟೀಚರ್ ' ಎಂದನು.

ಸುಂದರ ಪತ್ನಿಯನ್ನು ಹೊಂದಿರುವ ವಿವಾಹಿತ ಗುಂಡನ ಪ್ರಕಾರ ವೈವಾಹಿಕ ಜೀವನವೊಂದು ಕಾಶ್ಮೀರದ ಜ್ವಲಂತ ಸಮಸ್ಯೆಯಂತೆ. ನೋಡಲೇನೋ ಚೆಂದವಾಗಿರುತ್ತದೆ. ಆದರೆ ಆತಂಕವಾದದ ಕರಿ ನೆರಳ ಛಾಯೆ ಆಗಾಗ ಆವರಿಸುತ್ತಲೇ ಇರುತ್ತದೆ.

ಚುನಾವಣೆಯಲ್ಲಿ ಸತತ ಸೋಲುಂಡ ರಾಜಕೀಯ ಪಕ್ಷವೊಂದರ ವರಿಷ್ಠರಿಗೆ ಜನಸಾಮಾನ್ಯ ಪ್ರಜೆಯಾದ ಗುಂಡ ಫೋನಾಯಿಸಿ, 'ನಾನು ತಮ್ಮ ಪಕ್ಷದ ಮುಂದಿನ ಅಧ್ಯಕ್ಷನಾಗಲು ಬಯಸುತ್ತಿದ್ದೇನೆ' ಎಂದು ಅರುಹಿದ. ಅದಕ್ಕುತ್ತರಿಸಿದ ವರಿಷ್ಠರು 'ನೀನೇನು ಶತ ಮೂರ್ಖನೆ' ಎಂದು ಪ್ರಶ್ನಿಸಿದರು. ಅದಕ್ಕೆ ಗುಂಡ 'ಅಧ್ಯಕ್ಷಗಿರಿಗೆ ಈ ಅರ್ಹತೆ ಅವಶ್ಯವೆ' ಎಂದ.

ರಾಮು ಖಾಲಿ ಪೇಪರಿಗೆ ಬಾರಿ ಬಾರಿ ಮುತ್ತಿಕ್ಕುತ್ತಿದ್ದ. ಅದಕ್ಕೆ...
**ಗೋಪಿ:** ಏನಿದು?
**ರಾಮು:** ಲವ್ ಲೆಟರ್.
**ಗೋಪಿ:** ಆದರೆ ಇದು ಖಾಲಿ ಇದೆ?
**ರಾಮು:** ಇತ್ತೀಚೆಗೆ ನಮ್ಮ ನಡುವೆ ಯಾವುದೇ ಮಾತುಕತೆಯಿಲ್ಲ!

***

**ಸುಬ್ಬ:** ತ್ರೇತಾಯುಗದಲ್ಲಿ ವಾನರರಲ್ಲಿ ಮಹಾಶಕ್ತಿಶಾಲಿಯಾಗಿದ್ದ ವಾಲಿ. ಯಾರ ಜೊತೆ ಯುದ್ಧ ಮಾಡಿದರೂ ಅವರ ಅರ್ಧ ಶಕ್ತಿ ಅವನಿಗೆ ಬರುತ್ತಿತ್ತಂತೆ.
**ಮಬ್ಬ:** ಕಲಿಯುಗದಲ್ಲೂ ಹಾಗೆಯೇ ಇದೆ. ಯಾರು ಪತ್ನಿಯ ಜೊತೆ ಜಗಳವಾಡುತ್ತಾರೋ ಅವರ ಅರ್ಧ ಶಕ್ತಿ ಆಕೆಗೆ ಹೋಗುತ್ತದೆ. ಆದ್ದರಿಂದಲೇ ಆಕೆ 'ಘರ್ ವಾಲಿ'.

***

ಗುಂಡನಿಗೆ ಹೊಸ ನಂಬರಿಂದ ಫೋನ್ ಕರೆ ಬಂತು.
**ಮಹಿಳೆ:** ಮದುವೆ ಆಗಿದೆಯೆ?
**ಗುಂಡ:** (ಹೆಣ್ಣಿನ ದನಿ ಕೇಳಿದೊಡನೆ ಉತ್ಸಾಹದಿಂದ) ಇಲ್ಲ, ನಿಮಗೆ?
**ಫೋನ್ ಕರೆ:** (ಕೋಗಿಲೆ ದನಿ ಗಡುಸಾಗಿ ಉಲಿಯುತ್ತಾ) ಇವತ್ತು ಮನೆಗೆ ಬನ್ನಿ, ಹೇಳ್ತೀನಿ.

***

**ಪುಟ್ಟ:** ಅಮ್ಮ ನನಗೆ ಭೂತಕಾಲ, ವರ್ತಮಾನ ಕಾಲ ಮತ್ತು ಭವಿಷ್ಯತ್ ಕಾಲದ ಒಂದೊಂದು ವಾಕ್ಯಗಳನ್ನು ತಿಳಿಸಿ.
**ಅಮ್ಮ:** ನಾನು ಸುಂದರಿಯಾಗಿದ್ದೆ, ನಾನು ಸುಂದರಿಯಾಗಿದ್ದೇನೆ ಮತ್ತು ನಾನು ಸುಂದರಿಯಾಗಿರುತ್ತೇನೆ.
**ಪುಟ್ಟ(ಅಪ್ಪನ ಬಳಿ):** ಅಪ್ಪ, ಈಗ ನೀವು ಹೇಳಿ.
**ಅಪ್ಪ:** ಅವಳಿಗೆ ತಪ್ಪು ತಿಳಿವಳಿಕೆಯಿತ್ತು, ಅವಳಿಗೆ ತಪ್ಪು ತಿಳಿವಳಿಕೆಯಿದೆ ಮತ್ತು ಅವಳಿಗೆ ತಪ್ಪು ತಿಳಿವಳಿಕೆಯಿರುತ್ತದೆ!

***

ವಿವಾಹಿತ ಗುಂಡನ ಟಿ–ಶರ್ಟ್‌ನಲ್ಲಿ ಬರೆಯಲಾಗಿರುವ ಅನ್ವರ್ಥಕ ಸ್ಲೋಗನ್ ಹೀಗಿತ್ತು.
ಮದುವೆಯೆನ್ನುವುದೊಂದು ವರ್ಕ್ ಶಾಪ್! ವೈವಾಹಿಕ ಜೀವನದಲ್ಲಿ ಪತಿ ವರ್ಕ್ ಮಾಡುತ್ತಾ ಇರುತ್ತಾನೆ ಮತ್ತು ಪತ್ನಿ ಶಾಪ್ (ಶಾಪಿಂಗ್) ಮಾಡುತ್ತಿರುತ್ತಾಳೆ!

ಗುಂಡ ಬಾರಿನಲ್ಲಿ ಮದಿರಾಪಾನ ನಿರತನಾಗಿದ್ದಾಗ ಯಮಧರ್ಮರಾಯ ಪ್ರತ್ಯಕ್ಷನಾದ.
**ಯಮಧರ್ಮರಾಯ:** ನಾನು ಬಂದೆ ಕಣೋ ಗುಂಡ. ಬಾ ಹೋಗೋಣ.
**ಗುಂಡ:** ಅಯ್ಯೋ ಸ್ವಾಮಿ, ನಾನು ಈಗಲೂ ಫಿಟ್ ಆಗಿದ್ದೇನಲ್ಲ?
**ಯಮಧರ್ಮರಾಯ:** ಮನೆಯಿಂದ ಬರುವಾಗ ನೀನು ನಿನ್ನ ಮೊಬೈಲ್ ಲಾಕ್ ಮಾಡದೆ ಆನ್ ಮಾಡಿಟ್ಟು ಬಂದಿದ್ದೀಯ. ನಿನ್ನ ಪತ್ನಿ ಅದನ್ನು ತೆರೆದು ನಿನ್ನ ಸಂದೇಶಗಳನ್ನೆಲ್ಲಾ ಓದುತ್ತಿದ್ದಾಳೆ.
**ಗುಂಡ:** ಹಾಗಾದ್ರೆ ಸ್ವಲ್ಪ ತಾಳಿ ಸ್ವಾಮಿ. ಕೊನೆ ಸಿಪ್ ತಗೊಂಡ್ ಬಿಡ್ತೀನಿ.

ಸಂಗ್ರಹ: **ರಮೇಶ್ ಶೆಟ್ಟಿ ರೆಂಜಾಳ್,** ಮುಂಬೈ